"2002ರ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು):- ಮಾನ್ಯ ಅಧ್ಯಕ್ಷರೇ, "2002ರ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು:- ವಿಧೇಯಕವನ್ನು ಮಂಡಿಸಲಾಗಿದೆ.

ಅನುಬಂಧ - 3

ಅ. ವಿಧೇಯಕವನ್ನು ಹಿಂತೆಗೆದುಕೊಳ್ಳುವುದು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು) (ಮಾನ್ಯ ಸಣ್ಣ ಕೈಗಾರಿಕಾ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೇ, "ನಾನು ಈ ಕೆಳಕಂಡ ವಿಧೇಯಕವನ್ನು ಹಿಂತೆಗೆದುಕೊಳ್ಳಲು ಅನುಮತಿ ನೀಡಬೇಕೆಂದು ಕೋರುತ್ತೇನೆ."

"2000ನೇ ಸಾಲಿನ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ (ತಿದ್ದುಪಡಿ) ವಿಧೇಯಕವನ್ನು ಹಿಂತೆಗೆದುಕೊಳ್ಳಲು ಅನುಮತಿ ನೀಡುವುದು."

ಅಧ್ಯಕ್ಷರು:- ಮಾನ್ಯ ಮಂತ್ರಿಗಳಿಗೆ ಮೇಲ್ಕಂಡ ವಿಧೇಯಕವನ್ನು ಹಿಂತೆಗೆದುಕೊಳ್ಳಲು ಈ ಸಭೆಯು ಅನುಮತಿಸುತ್ತದೆಯೇ?

ಮಾನ್ಯ ಸದಸ್ಯರುಗಳು: ಆಗಬಹುದು.

ವಿಧೇಯಕವನ್ನು ಹಿಂತೆಗೆದುಕೊಳ್ಳಲು ಅನುಮತಿ ನೀಡಲಾಯಿತು.

ಶ್ರೀ ಪಿ.ಜಿ. ಆರ್. ಸಿಂಧ್ಯ(ಕನಕಪುರ):- ಮಾನ್ಯ ಅಧ್ಯಕ್ಷರೇ, ಸಭೆಯ ಮುಂದೆ ಮಂಡಿಸತಕ್ಕ ಕಾಗದಪತ್ರಗಳೀನಿವೆ, ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಇಲ್ಲದೇ ಹೋದರೆ ಮಂಡಿಸಲೇಬೇಡಿ ಎಂದು ವಿನಂತಿ ಮಾಡುವುದಾಗಿ ಮಾನ್ಯ ಮುಖ್ಯಮಂತ್ರಿಗಳೇ ಹಿಂದೆ ಹೇಳಿದ್ದರು, ಮುಖ್ಯವಾದ ಬಿಲ್ಲುಗಳನ್ನು ಇಂಟ್ರಡ್ಯೂಸ್ ಮಾಡುವ ಸಂದರ್ಭದಲ್ಲಿ ಇಲ್ಲಿ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಇಲ್ಲದೇ ಇರುವುದು, ಅವರ ಬೇಜವಾಬ್ದಾರಿತನವನ್ನು ತೋರಿಸುತ್ತದೆ. ಹಾಗಾದರೆ, ಇದು ಅವರಿಗೆ ಸಂಬಂಧವೇ ಇಲ್ಲವೇ? ದಯವಿಟ್ಟು, ತಾವು ಈ ರೀತಿ ಆಲೋ ಮಾಡಬಾರದು. ಅವರು ಬಂದಾಗ ಇಂಟ್ರಡ್ಯೂಸ್ ಮಾಡೋಣ. ಎಲ್ಲರ ಪರವಾಗಿ ಒಬ್ಬ ಮಂತ್ರಿಗಳೇ ಮಾಡುವುದಾದರೆ, ಮಾನ್ಯ ಮುಖ್ಯಮಂತ್ರಿಗಳೊಬ್ಬರೇ ಮಾಡಬಹುದು. ಹಾಗಾದರೆ ಮಂತ್ರಿಮಂಡಲ ಎಂದು ಏಕೆ ಬೇಕು?

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಸಿಂಧ್ಯರವರಿಗೂ ಗೊತ್ತು, ಜಂಟಿ ಜವಾಬ್ದಾರಿ ಇರುತ್ತದೆ, ಯಾರಾದರೂ ಮಂಡಿಸಬಹುದೆಂಬ ವಿಚಾರ ಅವರಿಗೂ ತಿಳಿದಿದೆ. ಒಂದೊಂದುಸಾರಿ ಈ ತರಹ ಆಗುತ್ತದೆ, ನಾವು ಅವರಿಗೆ ಹೇಳುತ್ತೇವೆ.